## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ

**ಸಿ.ಸಿ. ನಂ. 1159/2023** **ಫ್ರಾ.ಸಾ –5**
**ಚಾ.ಸಾ – 4**

ದಿನಾಂಕಃ 27.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಸುಬ್ಬ |
| ತಂದೆಯ ಹೆಸರು | : | ದೇವ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಬೆಸಗೂರು |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಆರೋಪಿ ನನ್ನ ಮಗಳ ಗಂಡ. ಚಾಸಾ 1 ನನ್ನ ಮಗಳು. ಚಾಸಾ 3 ನನ್ನ ಹೆಂಡತಿ. 11 ವರ್ಷದ ಹಿಂದೆ ಆರೋಪಿ ನನ್ನ ಮಗಳಿಗೆ ತಲೆ ಮೇಲೆ ಕಡಿದು ಹೋದವನು ಇವತ್ತು ಅವನನ್ನು ನೋಡುತ್ತಿದ್ದೇನೆ. ನನ್ನ ಮಗಳಿಗೆ ಆರೋಪಿ ತಲೆಗೆ ಕತ್ತಿಯಿಂದ ಹೊಡೆದಿರುತ್ತಾನೆ. ನನ್ನ ಹೆಂಡತಿಗೂ ಎಡಗೈಗೆ ಏಟಾಗಿ ನಂತರ ರಾಡ್ ಹಾಕಿಸಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿ. 18.06.2017 ರಂದು ನಾನು ಕೂಲಿ ಕೆಲಸ ಮುಗಿಸಿ ಮನೆಗೆ ಬಂದಾಗ ನನ್ನ ಮಗಳು ಮತ್ತು ಹೆಂಡತಿಗೆ ಆರೋಪಿಯು ಕತ್ತಿಯಿಂದ ಹಲ್ಲೆ ಮಾಡಿ ಓಡಿ ಹೋಗಿರುವ ವಿಚಾರ ನನಗೆ ಚಾಸಾ 3 ರವರಿಂದ ತಿಳಿಯಿತು ಎಂದರೆ ಸರಿ. ಆ ಸಮಯದಲ್ಲಿ ನನ್ನ ಮಗಳು ಪೊನ್ನಂಪೇಟೆ ಪೊ. ಠಾಣೆಯಲ್ಲಿ ದೂರು ದಾಖಲಿಸಿರುವ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿ. ಆ ಸಮಯದಲ್ಲಿ ನನ್ನ ಮಗಳು ಮತ್ತು ಹೆಂಡತಿ ಆಸ್ಪತ್ರೆಯಲ್ಲಿ ಚಿಕಿತ್ತೆ ಪಡೆಯಲು ತೆರಳಿರುವ ವಿಚಾರ ಗೊತ್ತಾಯಿತು ಎಂದರೆ ಸರಿ. ನಂತರ ನನ್ನ ಮಗಳಿಂದ ತಿಳಿದ

ವಿಚಾರವೇನೆಂದರೆ ಆರೋಪಿಯು ಮಧ್ಯಪಾನ ಮಾಡಿಕೊಂಡು ಬಂದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿ, ಕತ್ತಿಯಿಂದ ನನ್ನ ಮಗಳ ತಲೆಗೆ ಹಾಗೂ ನನ್ನ ಹೆಂಡತಿಯ ಕೈಗೆ ಕಡಿದ ವಿಚಾರ ತಿಳಿಯಿತು ಎಂದರೆ ಸರಿ. ದಿ. 19.06.2017 ರಂದು ಪೊನ್ನಂಪೇಟೆ ಪೊಲೀಸರು ನಮ್ಮ ವಾಸದ ಮನೆಯ ಬಳಿ ಬಂದು ಮಹಜರ್ ಕ್ರಮ ಜರುಗಿಸಿ ಕೃತ್ಯಕ್ಕೆ ಉಪಯೋಗಿಸಿದ ಒಂದು ಮಂಡೆ ಕತ್ತಿಯನ್ನು ಸಂಜೆ 05.00 ರಿಂದ 06.00 ಗಂಟೆ ತನಕ ಚಾಸಾ 5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆದರು ಎಂದರೆ ಸರಿ.. ಆ ಸಮಯದಲ್ಲಿ ಮಹಜರ್ಗೆ ನನ್ನ ಹೆಬ್ಬೆರಳಿನ ಗುರುತನ್ನು ಹಾಕಿರುತ್ತೇನೆ ಎಂದರೆ ಸರಿ.

ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು. ಮಾ 1 ಕತ್ತಿಯನ್ನು ಅಲ್ಲಗೆಳೆದಿರುತ್ತಾರೆ ಆದರೆ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸ್ ನವರಿಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ. ಎಸ್ ಎಸ್ ವಕೀಲರಿಂದಃ</u>

ನಾನು ಬೆಳಿಗ್ಗೆ ಕೂಲಿ ಕೆಲಸಕ್ಕೆ 03.30 ಗಂಟೆಗೆ ಮನೆಗೆ ಬರುತ್ತಿದ್ದೆ. ನಾನು ಬರುವಷ್ಟರಲ್ಲಿ ಗಲಾಟೆ ಮುಗಿದು ಹೋಗಿತ್ತು ಎಂದರೆ ಸರಿ. ಮನೆಯಲ್ಲಿ ಹೆಂಡತಿ ಮತ್ತು ಮಗಳು ಇದ್ದರು. ಮೊದಲಿನಿಂದಲೂ ಆರೋಪಿಯನ್ನು ನನ್ನ ಮಗಳಿಗೆ ಕೊಡಲು ಇಷ್ಟವಿರಲಿಲ್ಲ ಎಂದರೆ ಸರಿ. ನನಗೆ ಆರೋಪಿ ಮದುವೆ ಆದ ನಂತರವೂ ದ್ವೇಷ ಇತ್ತು ಎಂದರೆ ಸರಿಯಲ್ಲ. ಮೂರ್ನಾಡುವಿನಲ್ಲಿ ವಾಸಮಾಡಲು ನಾನು ಆರೋಪಿಗೆ ಮತ್ತು ಮಗಳಿಗೆ ಹೇಳಿದ್ದೆ ಎಂದರೆ ಸರಿ. ಅದರಂತೆ ಅವರಿಬ್ಬರೂ ಮೂರ್ನಾಡುವಿಗೆ ಹೋಗಿದ್ದು ಮತ್ತೆ ವಾಪಸ್ ಬಂದರು. ವಾಪಸ್ ಬಂದಿದ್ದಕ್ಕೆ ನಾನು ಆರೋಪಿ ಮೇಲೆ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಯಲ್ಲಿ ಇರಲು ನನಗೆ ಮತ್ತು ಮಗಳಿಗೆ ಇಷ್ಟಇರಲಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆದ ದಿನ ನನ್ನ ಮಗಳೇ ಜಗಳವನ್ನು ಶುರುಮಾಡಿರುತ್ತಾಳೆ ಎಂದರೆ ನಾನು ಇರಲಿಲ್ಲ. ನನ್ನ ಹೆಂಡತಿ ಹೇಗೆ ಹೇಳಿದಳು ಹಾಗೇ ಹೇಳುತ್ತೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನಾನು ಠಾಣೆಯಲ್ಲಿ ಮು. ಮಾ 1 ಅನ್ನು ನೋಡಿರುತ್ತೇನೆ. ಮು. ಮಾ

**CC. No. 1159/2023** **PW – 5**

1 ರ ಮೇಲೆ ನನ್ನ ಹೆಬ್ಬೆಟ್ಟು ಇಲ್ಲ. ಆರೋಪಿಯನ್ನು ಮನೆಯಿಂದ ಓಡಿಸಲು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ